ಇ) ಆಯೋಗದ ಕಾರ್ಯವ್ಯಾಪ್ತಿ ಏನು ಇದಕ್ಕೂ ಎಸ್.ಸಿ/ಎಸ್.ಟಿ. ಹಣಕಾಸು ಆಯೋಗಕ್ಕೂ ಇರುವ ವ್ಯತ್ಯಾಸವೇನು;

ಈ) ಆಯೋಗದ ಉಸ್ತುವಾರಿಯನ್ನು ಯಾರಿಗೆ ವಹಿಸಲಾಗುವುದು;

ಉ) ಸದರಿ ಆಯೋಗವು ತಾತ್ಕಾಲಿಕವೇ ಅಥವಾ ಖಾಯಂ ಆಗಿ ಕಾರ್ಯ ನಿರ್ವಹಿಸುವುದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕಾನೂನಿನ ದೃಷ್ಟಿಯಿಂದ ಪರಿಶೀಲನೆಯಾಗುತ್ತಿದೆ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಡ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ರೋಗಗ್ರಸ್ಥವಾಗುತ್ತಿರುವ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ

332 (245) ಶ್ರೀ ಸುರೇಶ್ ಕುಮಾರ್ .ಎಸ್ (ರಾಜಾಜಿನಗರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ ರೋಗಗ್ರಸ್ಥವಾಗಿದೆಯೇ? ಆಗಿದ್ದಲ್ಲಿ ಇದಕ್ಕೆ ಕಾರಣಗಳೇನು? ಮತ್ತು ಎಷ್ಟು ನಷ್ಟ ಅನುಭವಿಸುತ್ತಿದೆ?

ಆ) ಕೈಮಗ್ಗ ಅಭಿವೃದ್ಧಿ ನಿಗಮವನ್ನು ಮುಚ್ಚುವ ಸ್ಥಿತಿಗೆ ಸರ್ಕಾರ ಬಂದಿದೆಯೇ?

ಇ) ಕೈಮಗ್ಗ ಹೊಂದಿದ ನೇಕಾರರು ನಿಗಮದಿಂದ ಕಚ್ಚಾ ವಸ್ತು ಪಡೆದು ನೇಯ್ಗೆ ಮಾಡಿಕೊಟ್ಟರೆ, ಮೀಟರ್‌ಗೆ ಎಷ್ಟು ಬೆಲೆ ನೀಡಲಾಗುತ್ತದೆ? ಎಷ್ಟು ಜನ ನೇಕಾರರು ಈ ಕಾರ್ಯದಲ್ಲಿ ತೊಡಗಿದ್ದಾರೆ.

ಈ) ಇವರುಗಳಿಗೆ ಇದುವರೆಗೆ ಏನಾದರೂ ಕೊಡಬೇಕಾದ ಬಾಕಿ ಹಣವಿದೆಯೇ, ಇದ್ದಲ್ಲಿ ಎಷ್ಟು?

ಉ) ಹಾಲಿ ಕಚ್ಚಾ ವಸ್ತುಗಳನ್ನು ನಿಗಮ ಸರಬರಾಜು ಮಾಡುತ್ತಿದೆಯೇ?

ಊ) ಸರ್ಕಾರದ ವಿವಿಧ ಇಲಾಖೆಯ ಯಾವ ಯಾವ ಯೋಜನೆಗಳಲ್ಲಿ ಇವರಿಗೆ ಬೇಡಿಕೆ ಇದೆ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ರೋಗಗ್ರಸ್ಥವಾಗಿರುವುದಿಲ್ಲ

ಆ) ಇಲ್ಲ

ಇ) ನಿಗಮದಡಿಯಲ್ಲಿ ನಿಗಮದ ನೇಕಾರರಿಗೆ ಕಚ್ಚಾವಸ್ತು ಕೊಟ್ಟು ಬಟ್ಟೆ ಪರಿವರ್ತನಾ ಶುಲ್ಕವನ್ನು ಒಂದು ಮೀಟರಿಗೆ ಸರಾಸಗಿ ರೂ. 5.00 ರಿಂದ ರೂ. 15.00ವರೆಗೆ ಪಡೆಯುತ್ತಾರೆ. ಇದು ವಿವಿಧ ವಿನ್ಯಾಸಗಳ ಬಟ್ಟೆಯ ಉತ್ಪಾದನೆಗಳ ಮೇಲೆ ಅವಲಂಬಿತವಾಗಿರುತ್ತದೆ. 17,000 ನೇಕಾರರು ಈ ವೃತ್ತಿಯನ್ನು ಅವಲಂಬಿಸಿರುತ್ತಾರೆ.

ಈ) ಇರುವುದಿಲ್ಲ

ಉ) ಮಾಡುತ್ತಿದೆ.

ಊ) ಈಗ ಚಾಲ್ತಿಯಲ್ಲಿರುವ ಸರ್ಕಾರ ಯೋಜನೆಗಳೆಂದರೆ, ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನೆ ಮತ್ತು ಹಸಿರು ಪಡಿತರ ಚೀಟಿದಾರರಿಗೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಅಗ್ಗದ ದರದ ಸೀರೆ ಮತ್ತು ಧೋತಿ ಯೋಜನೆ ಇದಲ್ಲದೆ, ಈ ವರ್ಷ ಆರೋಗ್ಯ ಇಲಾಖೆಗೆ ಬೇಕಾಗುವ ಬ್ಯಾಂಡೇಜ್ ಬಟ್ಟೆ ಹಾಗೂ ಕೆ.ಎಸ್. ಆರ್. ಟಿ.ಸಿ. ಮತ್ತು ಕೆ.ಪಿ.ಟಿ.ಸಿ.ಎಲ್. ಇವರಿಗೆ ಬೇಕಾಗುವ ಬಟ್ಟೆ ಪೂರೈಸಲು ಭಾಗಶಃ ಬೇಡಿಕೆ ಇದೆ.

ಬೆಂಗಳೂರು ನಗರದಲ್ಲಿ ಬೀದಿ ಭಿಕ್ಷುಕರ ಹಾವಳಿ

334 (495) ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಸಿಗ್ನಲ್ ವೃತ್ತಗಳ ಬಳಿ ಭಿಕ್ಷೆ ಬೇಡುವವರ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ;

ಆ) ಬಂದಿದ್ದಲ್ಲಿ, ಇದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಬಂದಿದೆ

ಆ) ಬೆಂಗಳೂರು ನಗರದ ನಿಗ್ನಲ್ ವೃತ್ತಗಳ ಬಳಿ ಭಿಕ್ಷೆ ಬೇಡುವವರನ್ನು, ಅಲ್ಲದೆ ನಗರದ ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷೆ ಬೇಡುವವರನ್ನು ಕಾಯಿದೆಯ ಅಡಿಯಲ್ಲಿ ಬಂಧಿಸುವ ಮೂಲಕ ಭಿಕ್ಷಾಟನೆಯನ್ನು ಗಣನೀಯವಾಗಿ ನಿಯಂತ್ರಿಸಲಾಗುತ್ತಿದೆ. ಇದು ಅಲ್ಲದೆ ಭಿಕ್ಷೆ ಬೇಡುವುದು ಒಂದು ಸಾಮಾಜಿಕ ಅಪರಾಧ. ಇದಕ್ಕೆ ಬೇಡುವುದು ಒಂದು ಸಾಮಾಜಿಕ ಅಪರಾಧ, ಇದಕ್ಕೆ ಸಾರ್ವಜನಿಕರು ಉತ್ತೇಜನ ನೀಡಬಾರದೆಂದು ಸಾರ್ವಜನಿಕರ ಗಮನಕ್ಕೆ ತರಲು, ಕರಪತ್ರಗಳ ಮೂಲಕ ನಾಗರೀಕರಿಗೆ ತಿಳುವಳಿಕೆ ನೀಡಲಾಗುತ್ತಿದೆ. ಇದಲ್ಲದೆ ಚಿತ್ರಮಂದಿರಗಳಲ್ಲಿ ಸ್ಲೈಡ್ಸ್ ಮುಖಾಂತರ ತಿಳುವಳಿಕೆ ನೀಡಲಾಗುತ್ತಿದೆ. ಹಾಗೂ ನಗರದ ಪ್ರಮುಖ ಸ್ಥಳಗಳಲ್ಲಿ ಸಂಚಾರಿ ವಾಹನದ ಮೂಲಕ ಧ್ವನಿವರ್ಧಕದಿಂದ ಭಿಕ್ಷಾಟನೆ ನಿಷೇಧದ ಬಗ್ಗೆ ಪ್ರಚಾರ ಮಾಡಲಾಗುತ್ತಿದೆ.